e-mail : kannadaprabha@gmail.com
www. kannadaprabha.com

ಆರೋಗ್ಯ

ಕನ್ನಡಪ್ರಭ

ಬುಧವಾರ 24.6.2009

2 Ôä¥àÄÞV Èß}ß ÈßÕ×
3 ಕೃಷಿ ಪ್ರಭ ÑÔàÞ¥ÁÁ ÑÈÛÄß
4 ಪ್ರವಾಸ ಪ್ರಭ Èß×VÛÄ¥Æ ¶¬ ¸ÒÅV

ಜ್ವರದ ಫಿಟ್ಸ್

ಕೈಯಲ್ಲಿ ಕಬ್ಬಿಣ ಕೊಟ್ಟರೆ ಯಾವುದೇ ಪ್ರಯೋಜನವಿಲ್ಲ!

■ ಡಾ। ಅರವಿಂದ ಕಾಸರಗೋಡ್ (080–39898969)
■ ಡಾ। ಉಮಾಕಾಂತ ಅಡಿಗ (9980357015)

ÈßVßÉV ²méÓ ¶M¥ÚV H«ß ÉáÚs · ÞOß?

ಗಾಬರಿಯಾಗದೆ ಶಾಂತವಾಗಿರಿ. ಇದರಿಂದ ಮಗುವಿನ ಜೀವಕ್ಕೆ ಯಾವುದೇ ಅಪಾಯವಿಲ್ಲವೆಂದು ಮರೆಯಬೇಡಿ. ಸಾಮಾನ್ಯವಾಗಿ ಫಿಟ್ಸ್ 2–3 ನಿಮಿಷದಲ್ಲಿ ನಿಲ್ಲುತ್ತದೆ. ಶೇ. 90 ಮಕ್ಕಳಲ್ಲಿ ಫಿಟ್ಸ್ ಐದು ನಿಮಿಷದಲ್ಲಿ ಹತೋಟಿಗೆ ಬರುತ್ತದೆ.

■ **ಫಿಟ್ಸ್ ಬಂದಾಗ ನೀವು ಮಾಡಬೇಕಾದ ಕೆಲವು ಮುಖ್ಯ ಕಾರ್ಯಗಳು:**

- ಗಾಬರಿಯಾಗಬೇಡಿ
- ಮಗುವನ್ನು ಸಮತಟ್ಟಾದ ನೆಲದ (ಅಥವಾ ಹಾಸಿಗೆ) ಮೇಲೆ ಒಂದು ಪಕ್ಕಕ್ಕೆ ತಿರುಗಿಸಿ ಮಲಗಿಸಿ. ಮಗುವು ವಾಂತಿ ಮಾಡಿದರೆ ಅದು ಶ್ವಾಸಕೋಶಕ್ಕೆ ಹೋಗದಂತೆ ಇದರಿಂದ ತಡೆಯಬಹುದು.
- ಮಗುವಿನ ಬಾಯಿಯಲ್ಲಿ ನಿಮ್ಮ ಬೆರಳು ಅಥವಾ ಯಾವುದೇ ವಸ್ತುವನ್ನು ಹಾಕಬೇಡಿ. ಇದರಿಂದ ಮಗುವಿನ ಹಲ್ಲು ಅಥವಾ ಆ ವಸ್ತು ತುಂಡಾಗುವ ಸಾಧ್ಯತೆಗಳಿವೆ.
- ಮಗುವಿನ ಕೈನಲ್ಲಿ ಕಬ್ಬಿಣ ಅಥವಾ ಬೀಗದ ಕೈ ಇಡುವುದರಿಂದ ಯಾವುದೇ ಪ್ರಯೋಜನ ಇಲ್ಲ.
- ಮಗುವಿನ ಕೈ ಕಾಲುಗಳು ಒದರುವಾಗ ಅದನ್ನು ತಡೆಯಬೇಡಿ. ಮಗುವಿಗೆ ಏಟಾಗದಂತೆ ಮೆತ್ತಗಿನ ಬಟ್ಟೆ ಅಥವಾ ದಿಂಬನ್ನು ಇಡಬಹುದು.
- ಮಗುವಿಗೆ ಸಂಪೂರ್ಣ ಜ್ಞಾನ ಬರುವವರೆಗೆ ನೀರು ಅಥವಾ ಆಹಾರವನ್ನು ಬಾಯಿಗೆ ಹಾಕಬೇಡಿ.
- ಫಿಟ್ಸ್ 2–3 ನಿಮಿಷಗಳ ನಂತರವೂ ಹತೋಟಿಗೆ ಬರದಿದ್ದಲ್ಲಿ ಮಗುವನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ. ■

ಪುಟ್ಟ ಶರಣ್ಯಳಿಗೆ ಬೆಳಿಗ್ಗೆಯಿಂದ ಜ್ವರ. ಆಕೆಯ ತಾಯಿ ಅವಳಿಗೆ ಜ್ವರದ ಔಷಧವನ್ನು ಕೊಡುತ್ತಿದ್ದಾಳೆ. ಇದ್ದಕ್ಕಿದ್ದಂತೆ ಶರಣ್ಯಳ ಕಣ್ಣು ಮೇಲೆ ನೋಡುತ್ತಾ ಕೈ ಕಾಲುಗಳು ಗಟ್ಟಿಯಾಗಿ ಸೆಟೆದುಕೊಳ್ಳುತ್ತವೆ. ಆಕೆಯ ಬಾಯಿಯಿಂದ ಜೊಲ್ಲು ಸುರಿಯುತ್ತದೆ ಮತ್ತು ವಿಚಿತ್ರವಾದ ಸ್ವರ ಹೊರಡುತ್ತದೆ. ಮುಖವೆಲ್ಲಾ ನೀಲಿಯಾಗುತ್ತದೆ. ಆಕೆಯ ತಾಯಿ ಬಹಳ ಗಾಬರಿಗೊಳ್ಳುತ್ತಾಳೆ. ಎಷ್ಟು ಕರೆದರೂ ಶರಣ್ಯ ಮಾತನಾಡುವುದಿಲ್ಲ. ಈ ಗಲಾಟೆಯನ್ನು ಕೇಳಿ ಶರಣ್ಯಳ ತಂದೆ ಓಡಿ ಬರುತ್ತಾರೆ. ಶರಣ್ಯಳನ್ನು ಎತ್ತಿಕೊಂಡು ಇಬ್ಬರೂ ಆಸ್ಪತ್ರೆಗೆ ಓಡುತ್ತಾರೆ. ಆಸ್ಪತ್ರೆಗೆ ಬರುವಷ್ಟರಲ್ಲಿ ಶರಣ್ಯ ಸಾಮಾನ್ಯವಾಗಿ ನಿದ್ರಿಸುವಂತೆ ಕಾಣುತ್ತದೆ. ಕೂಡಲೇ ವೈದ್ಯರು ಬಂದು ಶರಣ್ಯಳನ್ನು ಪರೀಕ್ಷಿಸುತ್ತಾರೆ. ಅಷ್ಟರಲ್ಲಿ ಶರಣ್ಯ ಎದ್ದು ಅಳಲು ಪ್ರಾರಂಭಿಸುತ್ತಾಳೆ. ವೈದ್ಯರು ಗಾಬರಿಗೊಂಡ ಶರಣ್ಯಳ ಪೋಷಕರಿಗೆ ಜ್ವರದ ಫಿಟ್ಸ್ ಬಗ್ಗೆ ವಿವರಿಸುತ್ತಾರೆ.

■ ಜ್ವರದ ಫಿಟ್ಸ್ (Febrile seizures) ಎಂದರೇನು?

ಸಣ್ಣ ಮಕ್ಕಳಲ್ಲಿ ಜ್ವರ ಬಂದಾಗ ಕೆಲವೊಮ್ಮೆ ಫಿಟ್ಸ್ ಸಹ ಬರುತ್ತದೆ. ಮಿದುಳು ಜ್ವರ ಮತ್ತು ಇತರ ಗಂಭೀರ ಕಾಯಿಲೆಗಳು ಇದಕ್ಕೆ ಕಾರಣವಲ್ಲದಾಗ ಜ್ವರದ ಫಿಟ್ಸ್ ಎನ್ನುತ್ತಾರೆ. ಇದನ್ನು ಬಾಲಗ್ರಹ ಎಂದೂ ಕರೆಯುತ್ತಾರೆ.

ಶೇ.3–4 ಮಕ್ಕಳಲ್ಲಿ, ಸಾಮಾನ್ಯವಾಗಿ 6 ತಿಂಗಳಿನಿಂದ ಹಿಡಿದು 5 ವರ್ಷದ ಮಕ್ಕಳಲ್ಲಿ ಕಂಡು ಬರುತ್ತದೆ. ಇದು ಸಾಮಾನ್ಯವಾಗಿ ಜ್ವರ ಬಂದ 24 ಘಂಟೆಯಲ್ಲಿ ಬರುತ್ತದೆ ಹಾಗೂ ಯಾವುದೇ ದೀರ್ಘಾವಧಿಯ ತೊಂದರೆಗಳನ್ನು ಉಂಟು ಮಾಡುವುದಿಲ್ಲ. ಆದರೆ ಮೊದಲ ಬಾರಿ ನೋಡುವ ಪೋಷಕರು ಗಾಬರಿಯಾಗುವುದು ಸಹಜ.

■ ಕಾರಣವೇನು?

ನಿಖರವಾದ ಕಾರಣ ತಿಳಿದಿಲ್ಲ. ಜ್ವರ ಬಂದ ಎಲ್ಲ ಮಕ್ಕಳಿಗೂ ಈ ಸಮಸ್ಯೆ ಬರುವುದಿಲ್ಲ. ಇದು ಅನುವಂಶಿಕವಾಗಿ ಬರುವ ಸಾಧ್ಯತೆಗಳು ಹೆಚ್ಚು. ಮಗುವಿನ ತಂದೆ, ತಾಯಿ ಅಥವಾ ಇತರ ಮಕ್ಕಳನ್ನು ಸಹ ಈ ಸಮಸ್ಯೆ ಸಣ್ಣ ವಯಸ್ಸಿನಲ್ಲಿ ಕಾಡಿರಬಹುದು.

■ ಜ್ವರದ ಫಿಟ್ಸ್‌ನಿಂದ ಏನು ತೊಂದರೆ?

ಐದು ನಿಮಿಷಕ್ಕಿಂತ ಕಡಿಮೆ ಅವಧಿಯ ಸಾಮಾನ್ಯ ಜ್ವರದ ಫಿಟ್ಸ್‌ನಿಂದ (Simple Febrile seizures) ಯಾವ ತೊಂದರೆಯೂ ಉಂಟಾಗದು. ಪದೇ ಪದೇ ಬರುವ ಸಾಮಾನ್ಯ ಜ್ವರದ ಫಿಟ್ಸ್‌ನಿಂದ ಸಹ ಮಗುವಿನ ಬೆಳವಣಿಗೆ ಅಥವಾ ಬುದ್ಧಿಶಕ್ತಿಯ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ.

ಆದರೆ 15 ನಿಮಿಷಕ್ಕಿಂತ ಹೆಚ್ಚು ಬರುವ ಫಿಟ್ಸ್, 24 ಘಂಟೆಯಲ್ಲಿ ಅನೇಕ ಬಾರಿ ಬಂದರೆ ಅಥವಾ ಫಿಟ್ಸ್‌ನ ನಂತರ ನರ ದುರ್ಬಲತೆ ಉಂಟಾದರೆ ಆಗ ಇದನ್ನು ಸಮಗ್ರವಾಗಿ ಪರಿಶೀಲಿಸಬೇಕು. ಇದನ್ನು ಜಟಿಲ ಜ್ವರದ ಫಿಟ್ಸ್ (Complex Partial seizures) ಎಂದು ಕರೆಯುತ್ತಾರೆ.

■ ಮತ್ತೊಮ್ಮೆ ಹೀಗೆ ಫಿಟ್ಸ್ ಬರುವ ಸಾಧ್ಯತೆ ಇದೆಯೆ?

ಶೇ. 30–50 ರಷ್ಟು ಮಕ್ಕಳಿಗೆ ಮತ್ತೆ ಜ್ವರದೊಂದಿಗೆ ಫಿಟ್ಸ್ ಬರುವ ಸಾಧ್ಯತೆ ಇದೆ. ಜ್ವರವನ್ನು ನಿಯಂತ್ರಿಸುವುದರಿಂದ ಫಿಟ್ಸ್ ಬರುವುದನ್ನು ತಡೆಯಲು ಸಾಧ್ಯವಿಲ್ಲ. ಫಿಟ್ಸ್ ಬರುವ ಸಾಧ್ಯತೆ ಕಡಿಮೆ ಮಾಡಲು ಔಷಧ ನೀಡಬಹುದು. ಆದರೆ ಚಿಕಿತ್ಸೆ ನೀಡಿದರೂ ಅಥವಾ ನೀಡದಿದ್ದರೂ ಸಹ, 5–6 ವರ್ಷ ವಯಸ್ಸಿನ ನಂತರ ಜ್ವರದ ಫಿಟ್ಸ್ ಬರುವುದು ನಿಂತುಹೋಗುತ್ತದೆ.

■ ಜ್ವರದ ಫಿಟ್ಸ್‌ಗೆ ಚಿಕಿತ್ಸೆಯೇನು?

ಚಿಕಿತ್ಸೆಯು ಕೇವಲ ಜ್ವರ ಮತ್ತೆ ಜೊತೆಗಿರುವ ಸಮಸ್ಯೆಗಳಿಗೆ ಮಾತ್ರ. ಜಟಿಲವಾದ ಜ್ವರದ ಫಿಟ್ಸ್ ಮತ್ತು ಪದೇ ಪದೇ ಬರುವ ಫಿಟ್ಸ್‌ಗೆ ವೈದ್ಯರು ಚಿಕಿತ್ಸೆ ನೀಡಬಹುದು. ದೀರ್ಘಾವಧಿಯ ಫಿಟ್ಸ್ ನಿಯಂತ್ರಿಸುವ ಔಷಧಗಳನ್ನು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ.

ಜ್ವರದ ಫಿಟ್ಸ್ ಯಾವಾಗ ಬರಬಹುದೆಂದು ಮುಂಚಿತವಾಗಿ ತಿಳಿಯುವುದು ಅಸಾಧ್ಯ. ಆದರೆ ಜ್ವರ ಬಂದಾಗ ಫಿಟ್ಸ್ ಬರುವ ಸಾಧ್ಯತೆಯನ್ನು ಕಡಿಮೆ ಮಾಡಲು ಕೆಲವು ಔಷಧಗಳನ್ನು ನೀಡಲಾಗುತ್ತದೆ. (2–3 ದಿನಗಳು ಮಾತ್ರ).

■ ಮಗುವಿಗೆ ಮುಂದೆ ಅಪಸ್ಮಾರದ ರೋಗ (Epilepsy) ಬರಬಹುದೆ?

ಸಾಮಾನ್ಯವಾಗಿ ಬರುವುದಿಲ್ಲ. ■

ಮೊದಲ ಬಾರಿಗೆ ಬೆಂಗಳೂರು ನಗರದಲ್ಲಿ...
ಸರಳವಾಸ್ತು ಉಪನ್ಯಾಸ ಕಾರ್ಯಕ್ರಮ
ಹಾಗೂ
ತಮ್ಮ ಮನೆ/ ಉದ್ಯೋಗ ಸ್ಥಳದಿಂದ ಉಂಟಾಗುವ ಸಮಸ್ಯೆಗಳನ್ನು ತಾವೇ ತಿಳಿದುಕೊಳ್ಳುವ ಸರಳ ವಿಧಾನವನ್ನು ಗುರೂಜಿಯವರು ಕಲಿಸಿಕೊಡಲಿದ್ದಾರೆ.
ದಿನಾಂಕ : 28–06–2009 ಸಮಯ ಸಂಜೆ : 5–00ಕ್ಕೆ
ಸ್ಥಳ : ತೆಲುಗು ವಿಜ್ಞಾನ ಸಮಿತಿ, ವಯಾಲಿಕಾವಲ, ಬೆಂಗಳೂರು.
(ಪಿಟಿಲು ಚೌಡಯ್ಯ ಸ್ಮಾರಕ ಭವನ ಪಕ್ಕದಲ್ಲಿ)
ಶ್ರೀ ಚಂದ್ರಶೇಖರ ಗುರೂಜೀ B.E.(Civil)
ಪ್ರವೇಶ ಶುಲ್ಕ ರೂ 50/-
ಸಾಯಿಬಾತ ಆಸನಗಳಿವೆ ಕಾಯ್ದಿರಿಸಿಕೊಳ್ಳಲು ಕರೆ ಮಾಡಿ.
ಆರೋಗ್ಯ ಸಂಪತ್ತು ಮತ್ತು ಅಭಿವೃದ್ಧಿಗಾಗಿ
ಶ್ರೀ ಚಂದ್ರಶೇಖರ ಗುರೂಜೀಯವರ
ಶೇವಲ ರೂ 501/- ರೂ ಮಾತ್ರ
SARAL VAASTU
The Fine Art of Happy Living
God Gifted Concept based on ancient Indian culture
ಪಿನ ಮೂಲಕ ಸಾಧ್ಯ
Main Center : F1 /2/2, Gyanadeep Bld, Sector, 3&4, Vashi Navi Mumbai. Tel-27820660/61/62/63
CG Parivar
170/2, Sitaram Bldg, Behind peter England Show Room, 10th Cross, Sampige Road, Melleshwaram Banglore-03. Tel : 080-65465054
Tel : 0836-6553637, 9448286759, 9448035959, 2356239(Fax)

YOCO
Rs. 599/-
Magnetic Height Increase Device
PERFECT SAVER
The Electric Saver Saves upto 30-50%
MRP 3,999/- OFFER PRICE 1,499/-
Sauna Belt
Rs. 999/-
Reshape Your Bell
Breast Enhancement Massager
Ab Care
Special Offer
Rs. 5,999/- 4,999/- & Sana Belt FREE
HEALTH WALKER
Relief in Various Diseases
Diabetes, Fat/Obesity Blood Pressure, Joint Pain Back Pain, Asthama
DOLPHIN MASSAGER
Applicable to the physiotherapy for all parts of body
MRP 999/-
HEAR TONE
AMAZING Achievement DEVICE
599/-
MAHALAXMI SKY SHOP
9845758804, 9880333311